1	2	3	4
34	ಪರಮೇಶ್ವರಪ್ಪ	ಪಂರಾಇಂ ಉಪವಿಭಾಗ, ಹುಮನಾಬಾದ್	21 07 2000

1029 (1094) ಶ್ರೀ ಮೋಹನ್‌ಕೃಷ್ಣ ಶೆಟ್ಟಿ (ಕುಮಟಾ) ಮಾನ್ಯ ಜಲ ಸಂಪನ್ಮೂಲ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಪಶ್ಚಿಮ ಘಟ್ಟದಲ್ಲಿ ಹುಟ್ಟಿ ಕರಾವಳಿಯಲ್ಲಿ ಹರಿದು ಅರಬ್ಬಿ ಸಮುದ್ರ ಸೇರುವ ಹಲವಾರು ನದಿಗಳಿಗೆ ಅನೇಕ ಜಲವಿದ್ಯುತ್ ಯೋಜನೆಗಳಿದ್ದರೂ ಈ ಭಾಗದ ಸ್ಥಳೀಯ ನಾಗರೀಕರಿಗೆ, ರೈತರಿಗೆ ಉಪಯುಕ್ತವಾಗುವ ಬೃಹತ್ ನೀರಾವರಿ ಯೋಜನೆಗಳನ್ನು ಈವರೆಗೆ ಕೈಗೊಳ್ಳದಿರಲು ಕಾರಣಗಳೇನು,

ಆ) ಈ ಎಲ್ಲಾ ನದಿಗಳ ನೀರು ಬಳಕೆಯಾಗದೆ ನಿರುಪಯುಕ್ತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಬಂದಿದ್ದಲ್ಲಿ, ಅಘನಾಶಿನಿ, ಶರಾವತಿ ಮುಂತಾದ ನದಿಗಳಿಗೆ ಅಂತಹ ಬೃಹತ್ ನೀರಾವರಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು ನಾಗರೀಕರಿಗೆ ಕುಡಿಯುವ ನೀರು ಹಾಗೂ ಕೃಷಿ ಭೂಮಿಗೆ ನೀರಾವರಿ ಸೌಕರ್ಯ ಒದಗಿಸುವ ಬೃಹತ್ ಯೋಜನೆ ಸರ್ಕಾರದ ಮುಂದಿದೆಯೇ,

ಈ) ಇದ್ದಲ್ಲಿ ಇಂತಹ ಯೋಜನೆ ಯಾವಾಗ ಅನುಷ್ಠಾನ ಮಾಡಲಾಗುವುದು?

ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)

ಅ) ಉತ್ತರಕನ್ನಡ ಜಿಲ್ಲೆಯಲ್ಲಿ ಕಾಳಿ, ಬೇಡ್ತಿ, ಅಘನಾಶಿನಿ, ಶರಾವತಿ ಹಾಗೂ ವೆಂಕಟಾಪುರ ಎಂಬ ಐದು ಪ್ರಮುಖ ನದಿಗಳು ಹರಿಯುತ್ತಿದ್ದು, ಹೇರಳ ಜಲ ಸಂಪತ್ತು ಇದ್ದರೂ, ಅವುಗಳನ್ನು ನೀರಾವರಿಗೆ ಉಪಯೋಗಿಸಿಕೊಳ್ಳಲು ಯಾವುದೇ ಬೃಹತ್ ಅಥವಾ ಮಧ್ಯಮ ನೀರಾವರಿ ಯೋಜನೆಗಳಂತೆ ಅಣೆಕಟ್ಟುಗಳನ್ನು ಕಟ್ಟಲು ಸಾಧ್ಯವಾಗಿಲ್ಲ ಈ ಜಿಲ್ಲೆಯಲ್ಲಿ ಬಹಳ ಎತ್ತರಕ್ಕೆ ಇರುವ ಪರ್ವತಶ್ರೇಣಿ, ಕಡಿದಾದ ಮತ್ತು ಬಹು ಆಳಕ್ಕೆ

ಇರುವ ಕೊಳ್ಳಗಳು, ಕೃಷಿಗೆ ಅನುಕೂಲವಾಗುವ ವಿಸ್ತೃತವಾದ ಪ್ರದೇಶ ಇಲ್ಲದಿರುವುದು ಮುಂತಾದ ಕಾರಣಗಳಿಂದಾಗಿ ಇಲ್ಲಿನ ನೀರನ್ನು ನೀರಾವರಿಗೆ ಉಪಯೋಗಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ

ಆ) ಉತ್ತರಕನ್ನಡ ಜಿಲ್ಲೆಯ ನದಿಗಳ ನೀರು ನೀರಾವರಿಗೆ ಉಪಯುಕ್ತವಾಗುತ್ತಿರುವುದಿಲ್ಲವೆಂಬುದು ಗಮನಕ್ಕೆ ಬಂದಿದೆ

ಇ) ಉತ್ತರಕನ್ನಡ ಜಿಲ್ಲೆಯ 7 ನೀರಾವರಿ ಯೋಜನೆಗಳ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿ, ಈ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ ನೀರಾವರಿ ನಿಗಮ ನಿಯಮಿತಕ್ಕೆ ಹಸ್ತಾಂತರಿಸಲಾಗಿದೆ ಹೊನ್ನಾವರ ತಾಲ್ಲೂಕಿನ ಚಂದಾವರ ಊರಿನ ಹತ್ತಿರ ಚಂದಾವರ ಹಳ್ಳ ಹಾಗೂ ತೇವರ ಹಳ್ಳ ಕೂಡುವಲ್ಲಿ ಬ್ಯಾರೇಜ್ ನಿರ್ಮಾಣ ಯೋಜನೆಯ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡುವ ಕುರಿತು ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ

ಉತ್ತರಕನ್ನಡ ಜಿಲ್ಲೆಯಲ್ಲಿ ಹಲವಾರು ಮೂಲಗಳಿಂದ ನೀರಾವರಿಯಾಗುತ್ತಿರುವ ಪ್ರದೇಶಗಳ ವಿವರಗಳು ಈ ಕೆಳಗಿನಂತಿದೆ

ಕೆರೆಗಳಿಂದ	5,107 ಹೆಕ್ಟೇರುಗಳು
ಬಾವಿಗಳಿಂದ	5,151 ಹೆಕ್ಟೇರುಗಳು
ಕೊಳವೆ ಬಾವಿಗಳಿಂದ	1,203 ಹೆಕ್ಟೇರುಗಳು
ಏತ ನೀರಾವರಿಯಿಂದ	385 ಹೆಕ್ಟೇರುಗಳು
ಇತರೆ ಮೂಲಗಳಿಂದ	9,193 ಹೆಕ್ಟೇರುಗಳು
ಒಟ್ಟು	**21,039 ಹೆಕ್ಟೇರುಗಳು**

ಈ) ಕರ್ನಾಟಕ ನೀರಾವರಿ ನಿಗಮ ನಿಯಮಿತಕ್ಕೆ ಹಸ್ತಾಂತರಿಸಲಾಗಿರುವ 7 ನೀರಾವರಿ ಯೋಜನೆಗಳನ್ನು ಅನುದಾನಗಳ ಲಭ್ಯತೆಯ ಮೇರೆಗೆ ಕಾಲಬದ್ಧ ಕಾರ್ಯಕ್ರಮ ಹಾಕಿಕೊಂಡು ಅನುಷ್ಠಾನಗೊಳಿಸಲಾಗುವುದು